ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

ಸಾಕ್ಷಿಗೆ ದಿನಾಂಕಃ **11-06-2024** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.1858/2011
CW-12 PW-6

| | | |
|---|---|---|
| ಸಾಕ್ಷಿದಾರರ ಹೆಸರು | - | ಪುಂಡಲೀಕ ಹೊಳೆಪ್ಪ ತಾಳಿಕೋಟಿ, |
| ವಯಸ್ಸು | - | 57 ವರ್ಷ |
| ಉದ್ಯೋಗ | - | ವ್ಯಾಪಾರ |
| ಸಾಕೀನ | - | ಗೋಕಾಕ. |

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಚಾಸಾ-1 ರಿಂದ 11 ಮತ್ತು 13 ರಿಂದ 16 ಮತ್ತು ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುವುದಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಸೇರಿದ ಚಪ್ಪಲಿ ಅಂಗಡಿಯು ಗೋಕಾಕ ನಗರದ ಅಪ್ಸರಾ ಕೂಟದ ಬಳಿ ಇರುತ್ತದೆ ಎಂದರೆ ಸರಿ. ನಮ್ಮ ಅಂಗಡಿಯ ಮುಂದೆ ದ್ಯಾಮವ್ವನ ಗುಡಿ ಇತ್ತು ಎಂದರೆ ಸರಿ. ಸದರಿ ಗುಡಿಯಲ್ಲಿ ಎರಡು ಮೂರ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೂರ್ತಿಗಳಿಗೆ ಖಾಯಂವಾಗಿ ಬೆಳ್ಳಿಯ ಕಿರೀಟ್ ರೋಲ್ಡ್ ಗೋಲ್ಡಿನ ನಕಲೇಸ್ಸುಗಳು, ಬಂಗಾರದ ಗುಳದಾಳಿ ಮತ್ತು ನತ್ತುಗಳು ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಗುಡಿಯಲ್ಲಿ ಉತ್ಸವ ಮೂರ್ತಿ ಸಹ ಇತ್ತು ಎಂದರೆ ನನಗೆ ನೆನಪಿಲ್ಲ. ಸದರಿ ಗುಡಿಯ ಪೂಜಾರಿಗಳು ಚಾಸಾ-1 ರವರು ಆಗಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ಗುಡಿಯ ಪೂಜಾರಿಗಳು ಬೆಳಿಗ್ಗೆ 6.00 ಗಂಟೆಗೆ ಪೂಜೆಯನ್ನು ಮಾಡಿ ನಂತರ ರಾತ್ರಿ 9.00 ಗಂಟೆಯವರೆಗೆ ಗುಡಿಯಲ್ಲಿದ್ದು, ಕೀಲಿ ಹಾಕಿಕೊಂಡು ಮನೆಗೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

2) ದಿ:08.06.2011 ರಂದು ನಾನು ಮುಂಜಾನೆ 9.00 ಗಂಟೆಯ ಸುಮಾರಿಗೆ ಎಂದಿನಂತೆ ನನ್ನ ಅಂಗಡಿಯನ್ನು ತೆರೆಯಲು ಬರುವಷ್ಟರಲ್ಲಿ ಗ್ರಾಮ ದೇವತೆಯ ಗುಡಿಯ ಮುಂದೆ ಜನರು ಸೇರಿದ್ದರು ಎಂದರೆ ಸರಿಯಲ್ಲ. ನಾನು ಏನೂ ಅಂತಾ ಹೋಗಿ ನೋಡುವಷ್ಟರಲ್ಲಿ ದ್ಯಾಮವ್ವ ದೇವಿಯ ಗುಡಿಯ ಮುಂದಿನ ಶೆಟ್ಟರದ ಕೀಲಿ ಮತ್ತು ಗರ್ಭಗುಡಿಯ ಬಾಗಿಲದ ಶೆಟ್ಟರದ ಕೀಲಿಯನ್ನು ಯಾರೋ ಕಳ್ಳರು ಮುರಿದು ತೆಗೆದು ಗುಡಿಯಲ್ಲಿದ್ದ 1)ದೇವಿಯ ಬೆಳ್ಳಿಯ ಕೀರಿಟಗಳು ಎರಡು ಅಂದಾಜು 3 ಕೆ.ಜಿ ತೂಕಿನ ರೂ.1,80,000/- ಮೌಲ್ಯದ್ದು, 2)ಬೆಳ್ಳಿಯ ಉತ್ಸವ ಮೂರ್ತಿ ತೂಕ 4.5 ಕೇ.ಜಿ ಅಂದಾಜು ಕಿಮ್ಮತ್ತು ರೂ.2,70,000/-, 3)5 ಗ್ರಾಂ ಬಂಗಾರದ ಎರಡು ಮೂಗನತ್ತುಗಳು ಅಂದಾಜು ಕಿಮ್ಮತ್ತು ರೂ.10,000/-, 4) 4 ಗ್ರಾಂ ತೂಕದ ಎರಡು ಬಂಗಾರದ ಗೂಳದಾಳಿಗಳು ಅಂದಾಜು ಕಿಮ್ಮತ್ತು ರೂ.8,000/-, 5)ಎರಡು ರೋಡ್ ಗೋಲ್ಡ್ ನಕಲೆಸ್ಸುಗಳು ಅಂದಾಜು ಕಿಮ್ಮತ್ತು ರೂ.10,000/-, 6)ಕಾಣಿಕೆ ಪೆಟ್ಟಿಗೆಯಲ್ಲಿದ್ದ ರೂ.5,000/- ಹೀಗೆ ಒಟ್ಟು ರೂ.4,83,000/- ಕಿಮ್ಮತ್ತಿನ ವಸ್ತುಗಳನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂಬುವದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ.

3) ಈ ಘಟನೆಯ ಕುರಿತು ಚಾಸಾ-1 ರವರು ಪೋಲಿಸರಿಗೆ ದೂರು ನೀಡಿರುವ ವಿಷಯವು ಸಹ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನಾನು ಮೇಲ್ಕಂಡಂತೆ ಪೋಲಿಸರ ಮುಂದೆ ದಿ:08.06.2011 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಮಾನ್ಯ ಸ.ಸ.ಅ ಅವರು ಸಾಕ್ಷಿ ಓದಿ ಹೇಳಿದ್ದು, ಸಾಕ್ಷಿಯು ಅಲ್ಲಗಳೆದ ಮೇರೆಗೆ ನಿಪಿ.9 ಎಂದು ಗುರುತಿಸಲಾಯಿತು.

4) ದಿ:12.06.2011 ರಂದು ಪೋಲಿಸರು ನನಗೆ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಠಾಣೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಪೋಲಿಸರು ಜಪ್ತ ಮಾಡಿದ ಮಾಲುಗಳನ್ನು ಮತ್ತು 4 ಜನ ಆರೋಪಿತರನ್ನು ನನಗೆ ಠಾಣೆಯಲ್ಲಿ ತೋರಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರ ವಶದಿಂದ ಜಪ್ತಾದ ಬೆಳ್ಳಿಯ ಉತ್ಸವ ಮೂರ್ತಿ ಮತ್ತು ರೋಡ್ ಗೋಲ್ಡ್ ನಕಲೆಸ್ಸುಗಳನ್ನು ನಾನು ಗುರುತಿಸಿದ್ದೆ ಎಂದರೆ ಸರಿಯಲ್ಲ. ಆರೋಪಿತರ ಹೆಸರು 1)ಮಲ್ಲಪ್ಪ ಬೀಮಪ್ಪ ಮಾದರ, 2)ಹಾಲಪ್ಪ ಕಲ್ಲಪ್ಪ ಹೊನ್ನಾಗೋಳ, 3)ನಾಗಪ್ಪ ಶಿವಪ್ಪ ಮಣ್ಣವಡ್ಡರ, 4)ಮಹಾದೇವ ಶ್ರೀಮಂತ ನಂದಗಾಂವಿ ಎಂಬುವದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಸದರಿ ಆರೋಪಿತರ ಜೊತೆಗೆ ಇನ್ನೂ ಮೂರು ಜನರಾದ 1)ಬಸವರಾಜ, 2)ಸಂತೋಷ ಮತ್ತು 3)ಪಾಂಡು ಎಂಬುವವರು ಕೂಡಿ ದ್ಯಾಮವನ

ಗುಡಿಯನ್ನು ಕಳ್ಳತನ ಮಾಡಿರುವ ಸಂಗತಿ ಪೋಲಿಸರಿಂದ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಉಳಿದ ಮೂರು ಜನ ಆರೋಪಿತರು ಪರಾರಿಯಾಗಿರುತ್ತಾರೆ ಎಂಬುವುದು ಸಹ ನನಗೆ ಪೋಲಿಸರಿಂದ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆ ಕುರಿತು ನಾನು ಮೇಲ್ಕಂಡಂತೆ ದಿ:12.06.2011 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ಮಾನ್ಯ ಸ.ಸ.ಅ ಅವರು ಸಾಕ್ಷಿ ಓದಿ ಹೇಳಿದ್ದು, ಸಾಕ್ಷಿಯು ಅಲ್ಲಗಳೆದ ಮೇರೆಗೆ ನಿಪಿ.10 ಎಂದು ಗುರುತಿಸಲಾಯಿತು. ನಿಪಿ.9 ಮತ್ತು 10 ರಲ್ಲಿರುವ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲಃ

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು**,** ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

ಸಾಕ್ಷಿಗೆ ದಿನಾಂಕಃ **11-06-2024** ರಂದು ಪ್ರಮಾಣ ವಚನ ಬೋಧಿಸಲಾಯಿತು

C.C.No.1858/2011
CW-11 PW-5

ಸಾಕ್ಷಿದಾರರ ಹೆಸರು - ಶಿವಾನಂದ ಮುರಿಗೆಪ್ಪ ಹತ್ತಿ

ವಯಸ್ಸು - 65 ವರ್ಷ

ಉದ್ಯೋಗ - ಏನೂ ಇಲ್ಲ.

ಸಾಕೀನ - ಗೋಕಾಕ.

ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಚಾಸಾ-1 ರಿಂದ 10 ಮತ್ತು 12 ರಿಂದ 16 ಮತ್ತು ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುವುದಿಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ನನಗೆ ಸೇರಿದ ಬೆಲ್ಲದ ಅಂಗಡಿ ಗೋಕಾಕ ನಗರದ ಅಪ್ಸರಾ ಕೂಟದ ಬಳಿ ಇತ್ತು ಎಂದರೆ ಸರಿ. ನಮ್ಮ ಅಂಗಡಿಯ ಮುಂದೆ ದ್ಯಾಮವ್ವನ ಗುಡಿ ಇತ್ತು ಎಂದರೆ ಸರಿ. ಸದರಿ ಗುಡಿಯಲ್ಲಿ ಎರಡು ಮೂರ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೂರ್ತಿಗಳಿಗೆ ಖಾಯಂವಾಗಿ ಬೆಳ್ಳಿಯ ಕಿರೀಟ್ ರೋಲ್ಡ್ ಗೋಲ್ಡಿನ ನಕಲೇಸ್ಸುಗಳು, ಬಂಗಾರದ ಗುಳದಾಳಿ ಮತ್ತು ನತ್ತುಗಳು ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಗುಡಿಯಲ್ಲಿ ಉತ್ಸವ ಮೂರ್ತಿ ಸಹ ಇತ್ತು ಎಂದರೆ ನನಗೆ ನೆನಪಿಲ್ಲ. ಸದರಿ ಗುಡಿಯ ಪೂಜಾರಿಗಳು ಚಾಸಾ-1 ರವರು ಆಗಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ಗುಡಿಯ ಪೂಜಾರಿಗಳು ಬೆಳಿಗ್ಗೆ 6.00 ಗಂಟೆಗೆ ಪೂಜೆಯನ್ನು ಮಾಡಿ ನಂತರ ರಾತ್ರಿ 9.00 ಗಂಟೆಯವರೆಗೆ ಗುಡಿಯಲ್ಲಿದ್ದು, ಕೀಲಿ ಹಾಕಿಕೊಂಡು ಮನೆಗೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

2) ದಿ:08.06.2011 ರಂದು ನಾನು ಮುಂಜಾನೆ 8.00 ಗಂಟೆಯ ಸುಮಾರಿಗೆ ಎಂದಿನಂತೆ ನನ್ನ ಅಂಗಡಿಯನ್ನು ತೆರೆಯಲು ಬರುವಷ್ಟರಲ್ಲಿ ಗ್ರಾಮ ದೇವತೆಯ ಗುಡಿಯ ಮುಂದೆ ಜನರು ಸೇರಿದ್ದರು ಎಂದರೆ ಸರಿಯಲ್ಲ. ನಾನು ಏನೂ ಅಂತಾ ಹೋಗಿ ನೋಡುವಷ್ಟರಲ್ಲಿ ದ್ಯಾಮವ್ವ ದೇವಿಯ ಗುಡಿಯ ಮುಂದಿನ ಶೆಟ್ಟರದ ಕೀಲಿ ಮತ್ತು ಗರ್ಭಗುಡಿಯ ಬಾಗಿಲದ ಶೆಟ್ಟರದ ಕೀಲಿಯನ್ನು ಯಾರೋ ಕಳ್ಳರು ಮುರಿದು ತೆಗೆದು ಗುಡಿಯಲ್ಲಿದ್ದ 1)ದೇವಿಯ ಬೆಳ್ಳಿಯ ಕೀರಿಟಗಳು ಎರಡು ಅಂದಾಜು 3 ಕೆ.ಜಿ ತೂಕಿನ ರೂ.1,80,000/- ಮೌಲ್ಯದ್ದು, 2)ಬೆಳ್ಳಿಯ ಉತ್ಸವ ಮೂರ್ತಿ ತೂಕ 4.5 ಕೇ.ಜಿ ಅಂದಾಜು ಕಿಮ್ಮತ್ತು ರೂ.2,70,000/-, 3)5 ಗ್ರಾಂ ಬಂಗಾರದ ಎರಡು ಮೂಗನತ್ತುಗಳು ಅಂದಾಜು ಕಿಮ್ಮತ್ತು ರೂ.10,000/-, 4) 4 ಗ್ರಾಂ ತೂಕದ ಎರಡು ಬಂಗಾರದ ಗೂಳದಾಳಿಗಳು ಅಂದಾಜು ಕಿಮ್ಮತ್ತು ರೂ.8,000/-, 5)ಎರಡು ರೋಡ್ ಗೋಲ್ಡ್ ನಕಲೆಸ್ಸುಗಳು ಅಂದಾಜು ಕಿಮ್ಮತ್ತು ರೂ.10,000/-, 6)ಕಾಣಿಕೆ ಪೆಟ್ಟಿಗೆಯಲ್ಲಿದ್ದ ರೂ.5,000/- ಹೀಗೆ ಒಟ್ಟು ರೂ.4,83,000/- ಕಿಮ್ಮತ್ತಿನ ವಸ್ತುಗಳನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂಬುವದು ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ.

3) ಈ ಘಟನೆಯ ಕುರಿತು ಚಾಸಾ-1 ರವರು ಪೋಲಿಸರಿಗೆ ದೂರು ನೀಡಿರುವ ವಿಷಯವು ಸಹ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನಾನು ಮೇಲ್ಕಂಡಂತೆ ಪೋಲಿಸರ ಮುಂದೆ ದಿ:08.06.2011 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಮಾನ್ಯ ಸ.ಸ.ಅ ಅವರು ಸಾಕ್ಷಿ ಓದಿ ಹೇಳಿದ್ದು, ಸಾಕ್ಷಿಯು ಅಲ್ಲಗಳೆದ ಮೇರೆಗೆ ನಿಪಿ.7 ಎಂದು ಗುರುತಿಸಲಾಯಿತು.

4) ದಿ:12.06.2011 ರಂದು ಪೋಲಿಸರು ನನಗೆ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಠಾಣೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಪೋಲಿಸರು ಜಪ್ತ ಮಾಡಿದ ಮಾಲುಗಳನ್ನು ಮತ್ತು 4 ಜನ ಆರೋಪಿತರನ್ನು ನನಗೆ ಠಾಣೆಯಲ್ಲಿ ತೋರಿಸಿದ್ದರು ಎಂದರೆ ಸರಿಯಲ್ಲ. ಆರೋಪಿತರ ವಶದಿಂದ ಜಪ್ತಾದ ಬೆಳ್ಳಿಯ ಉತ್ಸವ ಮೂರ್ತಿ ಮತ್ತು ರೋಡ್ ಗೋಲ್ಡ್ ನಕಲೆಸ್ಸುಗಳನ್ನು ನಾನು ಗುರುತಿಸಿದ್ದೆ ಎಂದರೆ ಸರಿಯಲ್ಲ. ಆರೋಪಿತರ ಹೆಸರು 1)ಮಲ್ಲಪ್ಪ ಬೀಮಪ್ಪ ಮಾದರ, 2)ಹಾಲಪ್ಪ ಕಲ್ಲಪ್ಪ ಹೊನ್ಯಾಗೋಳ, 3)ನಾಗಪ್ಪ ಶಿವಪ್ಪ ಮಣ್ಣವಡ್ಡರ, 4)ಮಹಾದೇವ ಶ್ರೀಮಂತ ನಂದಗಾಂವಿ ಎಂಬುವದು ನನಗೆ

ಗೊತ್ತಾಗಿತ್ತು ಎಂದರೆ ಸರಿಯಲ್ಲ. ಸದರಿ ಆರೋಪಿತರ ಜೊತೆಗೆ ಇನ್ನೂ ಮೂರು ಜನರಾದ 1)ಬಸವರಾಜ, 2)ಸಂತೋಷ ಮತ್ತು 3)ಪಾಂಡು ಎಂಬುವವರು ಕೂಡಿ ದ್ಯಾಮವನ



ಗುಡಿಯನ್ನು ಕಳ್ಳತನ ಮಾಡಿರುವ ಸಂಗತಿ ಪೋಲಿಸರಿಂದ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಉಳಿದ ಮೂರು ಜನ ಆರೋಪಿತರು ಪರಾರಿಯಾಗಿರುತ್ತಾರೆ ಎಂಬುವುದು ಸಹ ನನಗೆ ಪೋಲಿಸರಿಂದ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆ ಕುರಿತು ನಾನು ಮೇಲ್ಕಂಡಂತೆ ದಿ:12.06.2011 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ಮಾನ್ಯ ಸ.ಸ.ಅ ಅವರು ಸಾಕ್ಷಿ ಓದಿ ಹೇಳಿದ್ದು, ಸಾಕ್ಷಿಯು ಅಲ್ಲಗಳೆದ ಮೇರೆಗೆ ನಿಪಿ.8 ಎಂದು ಗುರುತಿಸಲಾಯಿತು. ನಿಪಿ.7 ಮತ್ತು 8 ರಲ್ಲಿರುವ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲಃ

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.